ಅರಿತುಕೊಂಡು ಬರುತ್ತೇನೆ ಎಂದು ಏತಕ್ಕೆ ಹೇಳಬೇಕು? ಎಲ್ಲವನ್ನೂ ಅನುಭವಿಸಿಯೇ ತಿಳಿದುಕೊಳ್ಳಬೇಕೆಂಬ ಕಾನೂನು ಇದೆಯೇ? ಉದಾಹರಣೆಗೆ ಮರಣದ ಬಗ್ಗೆ ಪ್ರಶ್ನೆ ಕೇಳಿದರೆ 'ನಾನು ಅನುಭವಿಸಿ ತಿಳಿದುಕೊಂಡು ಬರುತ್ತೇನೆ' ಎಂದು ಹೇಳುತ್ತಾರೆಯೇ? ಜೈಮಿನಿ ಹೇಳುವ ಆರು ಪ್ರಮಾಣಗಳಲ್ಲಿ ಅನುಮಾನ, ಶ್ರವಣಜ್ಞಾನ ಸಹಾ ಇವೆಯಲ್ಲಾ?"

ಮಂಡನ ಮಿಶ್ರನಿಗೆ ಏನು ಉತ್ತರ ಕೊಡಬೇಕೆಂಬುದು ತಿಳಿಯಲಿಲ್ಲ. ಅವರು ಮಾತಿನ ದಿಕ್ಕನ್ನು ಬದಲಾಯಿಸಲು ಬಯಸಿದರು.

"ಒಂದು ರೀತಿಯಲ್ಲಿ ಅದೂ ಸಹಾ ಒಳ್ಳೆಯದಕ್ಕೆ. ಬುದ್ಧಿಯನ್ನು ರೂಪವನ್ನು ಒಂದಾಗಿ ಬೆರಸಿ ಬ್ರಹ್ಮ ನಿನ್ನಂತಹ ಹೆಣ್ಣನ್ನು ಬಹಳ ಅಪರೂಪವಾಗಿ ಸೃಷ್ಟಿಸಿದ್ದಾನೆ. ಶಂಕರ ನಾಳೆ ಬರದಿದ್ದರೆ, ಇಂತಹ ಅದ್ಭುತವಾದ ಸೃಷ್ಟಿಯೊಂದಿಗೆ ಕೂಡಿರುವ ಆನಂದವನ್ನು ನಾನು ನಿರಂತರವಾಗಿ ಉಳಿಸಿಕೊಳ್ಳುವೆ. ಹಾಗೊಮ್ಮೆ ಬಂದೇ ಬಿಟ್ಟರೆ, ನಿನ್ನನ್ನು ಒಂದು ತಿಂಗಳು ಹೆಚ್ಚಾಗಿ ಉಳಿಸಿಕೊಂಡ ಸಂತೋಷದಿಂದ ಅವರೊಂದಿಗೆ ಹೊರಟುಬಿಡುವೆ..."

ಸರಸವಾಣಿ ಈಗ ಸ್ವಲ್ಪ ಕೋಪ ಬೆರೆತ ದನಿಯಲ್ಲಿ ಅವರೊಂದಿಗೆ ಮಾತನಾಡಿದಳು. "ನನ್ನ ಮೇಲೆ ಅಷ್ಟೊಂದು ಆಸೆಯೇ ನಿಮಗೆ? ಹಾಗಾದರೆ, 'ವಾದದಲ್ಲಿ ಸೋತರೆ ಸನ್ಯಾಸ ಸ್ವೀಕರಿಸಬೇಕೆಂದು' ಶಂಕರ ವಿಧಿಸಿದ ನಿಯಮವನ್ನು ಯಾಕೆ ಒಪ್ಪಿಕೊಂಡಿರಿ? ಹಾಗೆ ಒಪ್ಪಿಕೊಳ್ಳುವ ಮೊದಲು ನನ್ನ ಅಭಿಪ್ರಾಯವನ್ನು ಕೇಳಬೇಕೆಂದು ನಿಮಗೆ ಅನಿಸಲಿಲ್ಲವೇ? ಸನ್ಯಾಸಿಗಳಿಗೆ ಮಾತ್ರವೇ ಅದ್ವೈತವನ್ನು ಹರಡುವ ಯೋಗ್ಯತೆ ಇರುವುದು? 'ಸಕಲವೂ ಒಂದೇ' ಎಂದು ಹೇಳಿಕೊಳ್ಳುವುದಲ್ಲವೇ ಅವರ ಅದ್ವೈತ ಸಿದ್ಧಾಂತ? ಹಾಗಾದರೆ ಅದ್ವೈತಿಗಳಿಗೆ 'ಗಂಡು ಹೆಣ್ಣು, ಸನ್ಯಾಸಿ ಸಂಸಾರಿ, ಎಂಬ ಭೇದಭಾವಗಳು ಹೇಗೆ ಬರಲು ಸಾಧ್ಯ? ಅವರು ಮದುವೆ ಮಾಡಿಕೊಳ್ಳದೆ ಸನ್ಯಾಸ ಸ್ವೀಕರಿಸಿ ಊರೂರು ಅಲೆದು ಅದ್ವೈತ ಪ್ರಚಾರ ಮಾಡುತ್ತಾರೆ; ಆದ್ದರಿಂದ ಯಾರಿಗೂ ಯಾವ ಸಮಸ್ಯೆಯೂ ಇಲ್ಲ. ಆದರೆ, ಆಗಲೇ ಮನೆ ಮಠ ಮಾಡಿಕೊಂಡು ಧರ್ಮ ಕಾರ್ಯಗಳನ್ನು ಮಾಡಿಕೊಂಡು ಸಂತೋಷವಾಗಿರುವ ಒಬ್ಬ ಸಂಸಾರಿಯ ಕುಟುಂಬವನ್ನು ಕೆಡವಿ, 'ನೀನೂ ನನ್ನಂತೆ ಕಾಷಾಯಧಾರಿಯಾಗಿ ನನ್ನೊಂದಿಗೆ ಹೊರಟು ಬಾ' ಎಂದು ಹೇಳುವುದು ಯಾವ ನ್ಯಾಯ? ಹಾಗೆ ನನ್ನಲ್ಲಿಲ್ಲದ ಆಕರ್ಷಣೆಯನ್ನು ಆ ಸನ್ಯಾಸಿಯಲ್ಲಿ ಏನು ಕಂಡಿರಿ?"

ಸರಸವಾಣಿಯನ್ನು ವಾದದಲ್ಲಿ ಗೆಲ್ಲುವುದು ಸುಲಭವಲ್ಲ ಎಂದು ಮಂಡನ ಮಿಶ್ರ ಅಂದುಕೊಂಡರು. ಅವಳು ಕೇಳುವ ಪ್ರಶ್ನೆಗಳಿಗೆ ಅವರ ಬಳಿ ಉತ್ತರವಿಲ್ಲ. ಅವಳು ಕೇಳುವುದು ಸರಿತಾನೇ. ಈ ರೂಪವತಿಯಲ್ಲಿ ಇಲ್ಲದ ಯಾವ ಸೆಳೆತ ಆ ತಲೆ ಬೋಳಿಸಿದ ಸನ್ಯಾಸಿಯ ಬಳಿ ಇದೆ? ಬಹುಶಃ ಗುರು ಕುಮಾರಿಲರ ಹೆಸರನ್ನು ಹೇಳಿ ಅವರು ನನ್ನ ಬಾಯಿ ಮುಚ್ಚಿಸಿದರೇ? ಅವೆಲ್ಲಾ ಇರಲಿ; ಆದರೆ ಇಷ್ಟೊಂದು ಬುದ್ಧಿವಂತಳಾದ ಇವಳು ಯಾಕೆ ನಮ್ಮಿಬ್ಬರ ಕೊರಳಿಗೆ ಹೂ ಮಾಲೆಯನ್ನು ತಗಲು ಹಾಕಿ 'ಹೂ ಬಾಡುವುದ'ನ್ನು ತೀರ್ಮಾನದ ವಸ್ತುವಾಗಿಸಿದಳು? ಪುಷ್ಪ ಎಂದರೆ ಅದು ಯಾವಾಗಲಾದರೂ ಬಾಡಲೇ ಬೇಕಲ್ಲವೇ? ವಾದ ಎಂದು ಬಂದರೆ ಕೋಪ, ವೇಗ ಎಲ್ಲಾ ಬರದೇ ಇರುತ್ತದೆಯೇ? ವಾದದಲ್ಲಿ ವಿಷಯ ಮುಖ್ಯವೇ, ಇಲ್ಲ ವಾದ ಮಾಡುವ ರೀತಿ ಮುಖ್ಯವೇ? ಆ ಸಮಯದಲ್ಲಲ್ಲದಿದ್ದರೆ ಇನ್ನಷ್ಟು ಸಮಯ ಕಳೆದನಂತರ ಆ ಸನ್ಯಾಸಿಗೂ ಕೋಪ ಬಂದಿರಬಹುದು.

ಬಹುಶಃ ಅವಳನ್ನು ಕೇಳದೆ ಸನ್ಯಾಸ ಸ್ವೀಕರಿಸುವ ಷರತ್ತಿಗೆ ನಾನು ಒಪ್ಪಿಕೊಂಡದ್ದು ಅವಳ